# CENTRAL BOARD OF SECONDARY EDUCATION

## Subject Name – KANNADA(015)

## Class- X

## Session-2023-24

## Blue Print/SQP/Marking Scheme

**Time Duration-3 hours** **Total Marks-80**

**ಲಿಖಿತ ಪ್ರಶ್ನೆಪತ್ರಿಕೆಯ ರಚನೆಯ ಹಂತಗಳು**

**1. ಉದ್ದಿಷ್ಟಗಳ ಶೇಕಡವಾರು ಅಂಕಗಳ ಹಂಚಿಕೆ**

| ಉದ್ದಿಷ್ಟಗಳು | ಜ್ಞಾನ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ | ಒಟ್ಟು |
|---|---|---|---|---|---|
| ಶೇಕಡಾ | 18.5% | 27.5% | 40% | 15% | 100% |
| ಅಂಕಗಳು | 15 | 21 | 32 | 12 | 80 |

**ಕಠಿಣತೆಯ ಆಧಾರದ ಮೇಲೆ ಶೇಕಡಾವಾರು ಅಂಕ ಹಂಚಿಕೆ**

| **ಕಠಿಣತೆ** | **ಶೇಕಡಾ ಅಂಕಗಳು** |
|---|---|
| ಸುಲಭ | 20% |
| ಸಾಧಾರಣ | 35% |
| ಕಠಿಣ | 45% |
| **ಒಟ್ಟು** | **100%** |

**ಪ್ರಶ್ನೆ ಪತ್ರಿಕೆಯ ನೀಲ ನಕ್ಷೆ**

| ಕ್ರ. ಸಂ | ಘಟಕಗಳ ಹೆಸರು | ಜ್ಞಾನ | | | ಗ್ರಹಿಕೆ | | | ಅಭಿವ್ಯಕ್ತಿ | | | ಪ್ರಶಂಸೆ | | | ಒಟ್ಟು | |
|---|---|---|---|---|---|---|---|---|---|---|---|---|---|---|---|
| | | ವಸ್ತುನಿಷ್ಠ | ಕಿರುಉತ್ತರ | ವಿವರಣಾತ್ಮಕ ಉತ್ತರ | ವಸ್ತುನಿಷ್ಠ | ಕಿರುಉತ್ತರ | ವಿವರಣಾತ್ಮಕ ಉತ್ತರ | ವಸ್ತುನಿಷ್ಠ | ಕಿರುಉತ್ತರ | ವಿವರಣಾತ್ಮಕ ಉತ್ತರ | ವಸ್ತುನಿಷ್ಠ | ಕಿರುಉತ್ತರ | ವಿವರಣಾತ್ಮಕ ಉತ್ತರ | ಪ್ರಶ್ನೆಗಳು | ಅಂಕಗಳು |
| 1 | ಅಪರಿಚಿತ ಗದ್ಯಭಾಗ ಓದು ಮತ್ತು ಅರ್ಥಗ್ರಹಣ(MCQ) | 3(3) | | | 2(2) | | | | | | | | | **5** | **5** |
| 2 | ಅಪರಿಚಿತ ಗದ್ಯಭಾಗ ಓದು ಮತ್ತು ಅರ್ಥಗ್ರಹಣ(MCQ) | 3(3) | | | 2(2) | | | | | | | | | **5** | **5** |
| 3 | ಗದ್ಯಭಾಗ ಓದು ಮತ್ತು ಅರ್ಥಗ್ರಹಣ (ಶುಕನಾಸನ ಉಪದೇಶ) | 2(2) | | | 3(3) | | | | | | | | | **5** | **5** |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 4 | ಪದ್ಯಭಾಗ ಓದು ಮತ್ತು ಅರ್ಥಗ್ರಹಣ (ಹಸುರು) | | | | | 3(3) | | | 2(2) | | | | | **5** | **5** |
| 5 | ವ್ಯಾಕರಣ (MCQ) | 5(5) | | | 5(5) | | | | | | | | | **10** | **10** |
| 6 | ವ್ಯಾಕರಣ (WRITING) | | | | | 3(3) | | | 2(2) | | | | | **5** | **5** |
| 7 | ಕೌಶಾಲ್ಯಾಧಾರಿತ ಪ್ರಶ್ನೆಗಳು (ಪಠ್ಯಪೋಷಕ) (MCQ) | 2(2) | | | 3(3) | | | | | | | | | **5** | **5** |
| 8 | ಪತ್ರಲೇಖನ /ಮನವಿಪತ್ರ/ /ಹುದ್ದೆಗೆ ಅರ್ಜಿ | | | | | | | | | 1(4) | | | | **1** | **4** |
| 9 | ವರದಿ | | | | | | | | | 1(4) | | | | **1** | **4** |
| 10 | ಪ್ರಬಂಧ | | | | | | | | | | | | 1(4) | **1** | **4** |
| 11 | ಶಬರಿ | | | | | | | | 1(2) | | | | * | **1** | **2** |
| 12 | ಭಾಗ್ಯಶಿಲ್ಪಿಗಳು( ನಾಲ್ವಡಿ ಕೃಷ್ಣರಾಜ ಒಡೆಯರು ಮತ್ತು ಸರ್. ಎಂ. ವಿಶ್ವೇಶ್ವರಯ್ಯ) | | | | | | | | | 1(3) | | | | **1** | **3** |
| 13 | ನಿಜವಾದ ಆದರ್ಶಪುರುಷ ಯಾರಾಗಬೇಕು? | | | | | | | | | 1(3) | | | | **1** | **3** |
| 14 | ವೃಕ್ಷಸಾಕ್ಷಿ | | | | | | | | | * | | | 1(4) | **1** | **4** |
| 15 | ಸಂಕಲ್ಪಗೀತೆ | | | | | | | | | * | | | 1(4) | **1** | **4** |
| 16 | ಹಲಗಲಿ ಬೇಡರು | | | | | | | | | 1(3) | | | | **1** | **3** |
| 17 | ಕೌರವೇಂದ್ರನ ಕೊಂದೆ ನೀನು | | | | | | | | 1(2) | | | | * | **1** | **2** |
| 18 | ವೀರಲವ | | | | | | | | | 1(3) | | | | **1** | **3** |
| 19 | ಉದಾತ್ತ ಚಿಂತನೆಗಳು | | | | | | | | | | | | | | |
| 20 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರು | | | | | | | | 1 (2) | | | | | **1** | **2** |
| 21 | ಭಗತ್ ಸಿಂಗ್ (ಲೇಖಕರು: ಚಿದಾನಂದ ಮೂರ್ತಿ ಜಿ.ಎಸ್) | | | | | | | | | | | | | | |
| 22 | ಸ್ವದೇಶಿ ಸೂತ್ರದ ಸರಳ ಹಬ್ಬ | | | | | | | | 1(2) | | | | | **1** | **2** |
| | ಒಟ್ಟು ಪ್ರಶ್ನೆಗಳು | **15** | | | **15** | **6** | | | **8** | **6** | | | **3** | **53** | **--** |
| | ಒಟ್ಟು ಅಂಕಗಳು | **15** | | | **15** | **6** | | | **12** | **20** | | | **12** | **--** | **80** |

**ಆವರಣದ ಹೊರಗಿನ ಸಂಖ್ಯೆಗಳು ಪ್ರಶ್ನೆಗಳ ಸಂಖ್ಯೆಯನ್ನು ಹಾಗೂ ಆವರಣದ ಒಳಗಿನ ಸಂಖ್ಯೆಗಳು ಅಂಕಗಳನ್ನು ಸೂಚಿಸುತ್ತವೆ.**

*** ಗುರುತು ಹೆಚ್ಚುವರಿ ಪ್ರಶ್ನೆಗಳನ್ನು ಸೂಚಿಸುತ್ತದೆ.**

**ಸೂಚನೆ : ಪ್ರಶ್ನೆ ಪತ್ರಿಕೆಯನ್ನು ತಯಾರಿಸುವಾಗ ನಿಗದಿಪಡಿಸಿರುವ ಪಾಠ/ಪದ್ಯ/ಪಠ್ಯಪೂರಕ ಅಧ್ಯಯನಗಳಿಗೆ ಪ್ರಶ್ನೆ ಮತ್ತು ಅಂಕಗಳ ಹಂಚಿಕೆ ಮಾಡಲಾಗಿದೆ. ಅದರಂತೆ ಪ್ರಶ್ನೆ ಪತ್ರಿಕೆ ತಯಾರಿಸುವಾಗ ಮೇಲಿನ ನೀಲ ನಕ್ಷೆಯನ್ನು ಅನುಸರಿಸುವುದು.**

- ಪಠ್ಯ ಪೋಷಕ ಅಧ್ಯಯನ ಪಾಠಗಳಲ್ಲಿ ನೀಲ ನಕ್ಷೆಯ ಪ್ರಕಾರ ಯಾವುದೇ ಪಾಠದ ಪ್ರಶ್ನೆಗಳನ್ನು ಕೇಳಬಹುದು.

**CENTRAL BOARD OF SECONDARY EDUCATION**

**SUBJECT: KANNADA**

**SUBJECT CODE - 015**

**CLASS - X**

**(2023 - 2024)**

**TIME: 3 HOURS** **Total MARKS: 80**

---

**ಸೂಚನೆಗಳು:**

- ಈ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 15 ಮುಖ್ಯ ಪ್ರಶ್ನೆಗಳಿರುತ್ತವೆ.
- ಈ ಪ್ರಶ್ನೆ ಪತ್ರಿಕೆಯು ಭಾಗ-A & ಭಾಗ-B ಎಂಬ ಎರಡು ಭಾಗಗಳನ್ನು ಮತ್ತು A B C D ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತವೆ.
- ವಿಭಾಗ- A ನಲ್ಲಿ ಒಟ್ಟು 4 ಮುಖ್ಯ ಪ್ರಶ್ನೆಗಳು, 10 ಬಹು ಆಯ್ಕೆಯ ಉಪ-ಪ್ರಶ್ನೆಗಳು ಮತ್ತು ಬರವಣಿಗೆಯ 10 ಪ್ರಶ್ನೆಗಳಿರುತ್ತವೆ.
- ಭಾಗ - A ಅನ್ವಯಿಕ ವ್ಯಾಕರಣದಲ್ಲಿ 10 ಬಹುಆಯ್ಕೆಯ ಪ್ರಶ್ನೆಗಳು, 5 ಬರವಣಿಗೆಯ ಪ್ರಶ್ನೆಗಳು ಮತ್ತು ಪಠ್ಯಪೂರಕದ 5 ಬಹು ಆಯ್ಕೆ ಪ್ರಶ್ನೆಗಳಿಗೆ ಉತ್ತರಿಸಬೇಕು.
- ಭಾಗ B- (ಬರವಣಿಗೆ ಕೌಶಲ್ಯ) ವಿಭಾಗ - C ನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಬೇಕು.
- ಭಾಗ B - (ಪಠ್ಯಗಳ ಅಧ್ಯಯನ) ಅಲ್ಲಿನ ವಿಭಾಗ - D ಯಲ್ಲಿಯ 11 ರಿಂದ 15 ಮುಖ್ಯ ಪ್ರಶ್ನೆಗಳಿಗೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.

| | | |
|---|---|---|
| **ಭಾಗ- A (40 ಅಂಕಗಳು)** | **ವಾಚನ ಮತ್ತು ಗ್ರಹಿಕಾ ಕೌಶಲ್ಯ** | **20 ಅಂಕಗಳು** |
| | **ಅನ್ವಯಿಕ ವ್ಯಾಕರಣ** | **15 ಅಂಕಗಳು** |
| | **ಬಹು ಆಯ್ಕೆಪ್ರಶ್ನೆ- ಪಠ್ಯಗಳ ಅಧ್ಯಯನ** | **05 ಅಂಕಗಳು** |
| **ಭಾಗ- B (40 ಅಂಕಗಳು)** | **ಬರವಣಿಗೆ ಕೌಶಲ್ಯ** | **12 ಅಂಕಗಳು** |
| | **ಪಠ್ಯಗಳ ಅಧ್ಯಯನ** | **28 ಅಂಕಗಳು** |
| | **ಒಟ್ಟು ಅಂಕಗಳು** | **80 ಅಂಕಗಳು** |

**PART – A.(40 ಅಂಕಗಳು)**

**SECTION -A**

**(ವಾಚನ ಮತ್ತು ಗ್ರಹಿಕಾ ಕೌಶಲ್ಯ) = 10 ಅಂಕಗಳು.**

1. **ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **5X1=5**

ಕೆಳದಿ ಶಿವಪ್ಪ ನಾಯಕ ಕೆಳದಿ ಸಾಮ್ರಾಜ್ಯದ ಪ್ರಸಿದ್ಧ ಆಡಳಿತಗಾರ. ಕೆಳದಿ ನಾಯಕರು 16ನೇ ಶತಮಾನದ ಉತ್ತರಾರ್ಧದಲ್ಲಿ ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿಗಳಾಗಿದ್ದರು. ಇಕ್ಕೇರಿ ಕೆಳದಿ ನಾಯಕರ ರಾಜಧಾನಿಯಾಗಿತ್ತು. ಕೆಳದಿ ನಾಯಕರು 1763 ರಲ್ಲಿ ಮೈಸೂರು ಸಾಮ್ರಾಜ್ಯಕ್ಕೆ ಶರಣಾಗುವ ಮೊದಲು, ಆಧುನಿಕ ಕರ್ನಾಟಕದ ಕರಾವಳಿ, ಬೆಟ್ಟ ಮತ್ತು ಕೆಲವು ಆಂತರಿಕ ಜಿಲ್ಲೆಗಳನ್ನು ( ಬಯಲುಸೀಮೆ ) ಒಳಗೊಂಡ ಸ್ಥಾಪಿತ ಸಾಮ್ರಾಜ್ಯವನ್ನು ನಿರ್ಮಿಸಿದರು,

ಶಿವಪ್ಪ ನಾಯಕ ಒಬ್ಬ ಸಮರ್ಥ ಆಡಳಿತಗಾರ ಮತ್ತು ಸೈನಿಕ. ಅವರು 1645 ರಲ್ಲಿ ಸಿಂಹಾಸನವನ್ನು ಏರಿದರು. ಈ ಸಮಯದಲ್ಲಿ, ವೆಲ್ಲೂರಿನಿಂದ ಆಳಿದ ವಿಜಯನಗರ ಸಾಮ್ರಾಜ್ಯದ ಕೊನೆಯ ದೊರೆ ಶ್ರೀರಂಗರಾಯ-III ಬಿಜಾಪುರ ಸುಲ್ತಾನರಿಂದ ಸೋಲಿಸಲ್ಪಟ್ಟರು ಮತ್ತು ಶಿವಪ್ಪನ ನಾಯಕನ ಆಶ್ರಯವನ್ನು ಪಡೆದರು. ಪೋರ್ಚುಗೀಸರ ಬೆದರಿಕೆಗೆ ಬಗ್ಗದೆ ಕೆಳದಿ ನಾಯಕರು ಮಂಗಳೂರು, ಕುಂದಾಪುರ ಮತ್ತು ಹೊನ್ನಾವರ ಬಂದರುಗಳನ್ನು ತಮ್ಮ ನಿಯಂತ್ರಣಕ್ಕೆ ತಂದುಕೊಂಡರು. ಕನ್ನಡ ಕರಾವಳಿಯನ್ನು ಗೆದ್ದ ನಂತರ, ಅವರು ಆಧುನಿಕ ಕೇರಳದ ಕಾಸರಗೋಡು ಪ್ರದೇಶಕ್ಕೆ ದಂಡೆತ್ತಿ ಹೋಗಿ ನೀಲೇಶ್ವರದಲ್ಲಿ ವಿಜಯಸ್ತಂಭವನ್ನು ಸ್ಥಾಪಿಸಿದರು. ಚಂದ್ರಗಿರಿ, ಬೇಕಲ್, ಅಡ್ಕ ಕೋಟೆ, ಆರಿಕ್ಕಾಡಿ ಮತ್ತು ಮಂಗಳೂರಿನ ಕೋಟೆಗಳನ್ನು ಶಿವಪ್ಪ ನಾಯಕನು ನಿರ್ಮಿಸಿದನು.

ಶಿವಪ್ಪ ನಾಯಕ ಅವರು ಸಿಸ್ಟ್ ಎಂಬ ರಾಜಸ್ವ ಪರಿಹಾರ ಯೋಜನೆಯನ್ನು ಪರಿಚಯಿಸಿದರು , ಇದು ಮೊಗಲ್ ಚಕ್ರವರ್ತಿ ಅಕ್ಬರ್ ರೂಪಿಸಿದ ಕಂದಾಯ ಯೋಜನೆಗಳಿಗೆ ಅನುಕೂಲಕರ ಹೋಲಿಕೆಯನ್ನು ಕಂಡುಕೊಂಡಿದೆ. ಈ ಯೋಜನೆಯ ಪ್ರಕಾರ, ಮಣ್ಣಿನ ಪ್ರಕಾರ ಮತ್ತು ಲಭ್ಯವಿರುವ ನೀರಾವರಿ ಸೌಲಭ್ಯಗಳ ಆಧಾರದ ಮೇಲೆ ಕೃಷಿ ಭೂಮಿಯನ್ನು ಐದು ವಿಧಗಳಾಗಿ ವಿಂಗಡಿಸಲಾಗಿದೆ. *ಖಂಡುಗ* ಎಂಬ ಬಿತ್ತನೆ ಸಾಮರ್ಥ್ಯದ ಘಟಕವನ್ನು ಅಭಿವೃದ್ಧಿಪಡಿಸಲಾಯಿತು ಮತ್ತು ಪ್ರತಿ ನೀರಾವರಿ ಭೂಮಿಗೆ ಈ ಘಟಕದ ಆಧಾರದ ಮೇಲೆ ವಿವಿಧ ಮೊತ್ತಗಳಲ್ಲಿ ತೆರಿಗೆ ವಿಧಿಸಲಾಯಿತು. ತೆರಿಗೆಯ ದರವು ಈ ಐದು ರೀತಿಯ ಭೂಮಿಯಲ್ಲಿ ಪ್ರತಿಯೊಂದರ ಇಳುವರಿಯನ್ನು ಅವಲಂಬಿಸಿದೆ, ದರವು ಹಳ್ಳಿಯಿಂದ ಗ್ರಾಮಕ್ಕೆ ಬದಲಾಗುತ್ತದೆ ಮತ್ತು ಒಟ್ಟು ಇಳುವರಿಯಲ್ಲಿ ಮೂರನೇ ಒಂದು ಭಾಗದಷ್ಟು ಇರುತ್ತದೆ. ಶಿವಪ್ಪ ನಾಯಕ ಅವರು ಕೃಷಿಗೆ ಪ್ರಾಮುಖ್ಯತೆಯನ್ನು ನೀಡಿದರು, ಇದು ಕೃಷಿ ಆರ್ಥಿಕತೆಯನ್ನು ವಿಸ್ತರಿಸಲು ಕಾರಣವಾಯಿತು.

**ಪ್ರಶ್ನೆಗಳು:**

**I.** ಕೆಳದಿ ನಾಯಕರ ರಾಜಧಾನಿ-------

A. ಬನವಾಸಿ

B. ಇಕ್ಕೇರಿ

C. ಬಿದನೂರು

**D.** ಚಿತ್ರದುರ್ಗ

**II.** ಬಿಜಾಪುರ ಸುಲ್ತಾನರಿಂದ ಸೋಲಿಸಲ್ಪಟ್ಟ ದೊರೆ --------

A. ಶ್ರೀರಂಗರಾಯ-III

B. ಅಕ್ಬರ್

C. ಹೈದರ್ ಆಲಿ

D. ಮೈಸೂರು ಅರಸರು

**III.** ಖಂಡುಗ ಎಂದರೆ -----------

A. ಮಣ್ಣಿನ ಪ್ರಕಾರ

B. ಇದೊಂದು ಸಸ್ಯವರ್ಗ

C. ಇದೊಂದು ಪಕ್ಷಿವರ್ಗ

D. ಇದೊಂದು ಬಿತ್ತನೆ ಸಾಮರ್ಥ್ಯದ ಘಟಕ

**IV.**ಈ ಕೆಳಗಿನ ಹೇಳಿಕೆಗಳನ್ನು ಸರಿಯಾಗಿ ಓದಿ ಉತ್ತರ ಬರೆಯಿರಿ.

ಹೇಳಿಕೆ:- 1 ಶಿವಪ್ಪ ನಾಯಕ ಅವರು ಸಿಸ್ಟ್ ಎಂಬ ರಾಜಸ್ವ ಪರಿಹಾರ ಯೋಜನೆಯನ್ನು ಪರಿಚಯಿಸಿದರು

ಹೇಳಿಕೆ:- 2 ಈ ಮೇಲಿನ ಪರಿಹಾರ ಯೋಜನೆಯು ಬಾಬರ್ ಕಾಲದ ಯೋಜನೆಗೆ ಹೋಲಿಕೆಯಾಗಿದೆ.

A. ಮೇಲಿನ ಎರಡು ಹೇಳಿಕೆಗಳು ಸರಿಯಾಗಿವೆ.
B. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.
C. ಮೊದಲಿನ ಹೇಳಿಕೆಯು ಮಾತ್ರ ಸರಿಯಾಗಿದೆ.
D. ಎರಡನೆಯ ಹೇಳಿಕೆಯು ಮಾತ್ರ ಸರಿಯಾಗಿದೆ.

**V.** ಶಿವಪ್ಪನಾಯಕನು ಸ್ಥಾಪಿಸಿದ ಕೋಟೆಗಳು --------

A. ಚಂದ್ರಗಿರಿ, ಬೇಕಲ್, ಅಡ್ಕ ಕೋಟೆ, ಆರಿಕ್ಕಾಡಿ
B. ಚಂದ್ರಗಿರಿ, ವಿಜಯನಗರ, ಅಡ್ಕ ಕೋಟೆ, ಚಿತ್ರದುರ್ಗ
C. ಚಂದ್ರಗಿರಿ, ಬೇಕಲ್, ಮೈಸೂರು, ಶ್ರೀರಂಗಪಟ್ಟಣ
D. ಶ್ರವಣಬೆಳಗೊಳ, ಬೇಕಲ್, ಸಾವನ ದುರ್ಗ, ಆರಿಕ್ಕಾಡಿ

2. **ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 5X1=5**

ಚನ್ನಪಟ್ಟಣ ಮೈಸೂರು-ಬೆಂಗಳೂರು ರಾಜ್ಯ ಹೆದ್ದಾರಿಯಲ್ಲಿ ಬರುವ ಪ್ರಮುಖ ಐತಿಹಾಸಿಕ ಮಹತ್ವ ಪಡೆದ ನಗರವಾಗಿದೆ. ಚನ್ನಪಟ್ಟಣಕ್ಕೆ ಮೊದಲಿದ್ದ ಹೆಸರು `ಚಂದದ ಪಟ್ಟಣ', ಅದನ್ನು `ಚಂದಾಪುರ' ಎಂದು ಕರೆಯುತ್ತಿದ್ದರು ಎಂದು ಇತಿಹಾಸದ ದಾಖಲೆಯಿಂದ ತಿಳಿದುಬರುತ್ತದೆ. ಗುಲಗಂಜಿ ಗಾತ್ರದ ಗೊಂಬೆಗಳಿಂದ ಹಿಡಿದು ದೊಡ್ಡ ಗೊಂಬೆಗಳ ಕೆತ್ತನೆಯಲ್ಲಿ ಕುಶಲ ಕರ್ಮಿಗಳಾದ ನಿಪುಣರು ಬುಗುರಿ**,** ಬ್ಯಾಂಡ್ ಸೆಟ್**,** ದಿಬ್ಬಣ ತಂಡದ ಆಟಿಕೆ ಗೊಂಬೆಗಳು ಹಾಗೂ ದಸರಾ ಗೊಂಬೆಗಳು ಹಾಗೂ ದೇವರ ಗೋಪುರ**,** ವಿವಿಧ ಭಂಗಿಯ ವಿಗ್ರಹಗಳು**,** ಗೃಹಾಲಂಕಾರದ**,** ಗೃಹೋಪಯೋಗಿ ವಸ್ತುಗಳು**,** ಮರದ ಆಭರಣಗಳು ತಯಾರಾಗುತ್ತವೆ.ಚನ್ನಪಟ್ಟಣದಲ್ಲಿ ಸಾವಿರಕ್ಕೂ ಹೆಚ್ಚು ಬಗೆಯ ಗೊಂಬೆಗಳು ಸಿದ್ಧವಾಗುತ್ತವೆ. ಈ ಗೊಂಬೆಗಳ ತಯಾರಿಕೆಯಲ್ಲಿ ಕಾಲಕ್ರಮೇಣ ಬದಲಾವಣೆಗಳಾಗಿವೆ. ಸಾಂಪ್ರದಾಯಿಕವಾಗಿ ಆಲೆಮರದಲ್ಲಿ ತಯಾರಿಸಲಾಗುತ್ತಿದ್ದರೂ ಅದರ ಜೊತೆ ರಬ್ಬರ್**,** ಪೈನ್**,** ಟೀಕ್**,** ಮರಗಳೂ ಬಳಸಲ್ಪಡುತ್ತಿವೆ. ಗೊಂಬೆಗಳ ಕೆತ್ತನೆಗೆ ಬೇಕಾದ ಮೃದುವಾದ ಆಲೆ ಮರಗಳು ಚನ್ನಪಟ್ಟಣದಲ್ಲಿಯೇ ಬೆಳೆಯುತ್ತವೆ. ಗೊಂಬೆಗಳ ತಯಾರಿಕೆಯ ಹಂತಗಳು ಹೀಗಿರುತ್ತವೆ. ಮರವನ್ನು ತರುವುದು**,** ಅದರನ್ನು ಸಂಸ್ಕರಿಸುವುದು**,** ಬೇಕಾದ ಆಕಾರಕ್ಕೆ ಕತ್ತರಿಸುವುದು**,** ಗೊಂಬೆಗಳನ್ನು ಕೊರೆಯುವುದು**,** ಬಣ್ಣ ಹಚ್ಚುವುದು ಮತ್ತು ಕೊನೆಗೆ ಪಾಲಿಶ್ ಮಾಡುವುದು. ಈ ಗೊಂಬೆಗಳು ಮಕ್ಕಳ ಆಟಿಕೆಯಾಗಿ ಬಳಕೆಯಾಗುವುದರಿಂದ ಸುರಕ್ಷತೆಗಾಗಿ ಸಸ್ಯಜನ್ಯ ಬಣ್ಣಗಳನ್ನು ಬಳಸಲಾಗುತ್ತದೆ.

ಅಕ್ಟೋಬರ್ 2006 ರ ಅಂಕಿ ಅಂಶಗಳ ಪ್ರಕಾರ ಆರುಸಾವಿರಕ್ಕಿಂತಲೂ ಹೆಚ್ಚು ಜನರು 254 ಗೃಹ ಕೈಗಾರಿಕಾ ಘಟಕಗಳಲ್ಲಿ ಮತ್ತು 50 ಸಣ್ಣ ಕಾರ್ಖಾನೆಗಳಲ್ಲಿ ಈ ಗೊಂಬೆಗಳ ತಯಾರಿಕೆಯಲ್ಲಿ ತೊಡಗಿದ್ದಾರೆ. ಸರಿಯಾದ ಮಾರುಕಟ್ಟೆ ಬೆಂಬಲವಿಲ್ಲದೇ ಒಂದು ಅವಧಿಯಲ್ಲಿ ದಶಕಕ್ಕೂ ಹೆಚ್ಚು ಕಾಲ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಚನ್ನಪಟ್ಟಣದ ಗೊಂಬೆ ನಾಶವಾಗುವ ಹಂತ ತಲುಪಿತ್ತು. ತದನಂತರ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ನೆರವಿನಿಂದ ಕರಕುಶಲಕರ್ಮಿಗಳಿಗೆ ಇಂದಿನ ಬದಲಾಗುತ್ತಿರುವ ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ತರಬೇತಿ ನೀಡಲಾಯಿತು. ನುರಿತ ಕುಶಲಕರ್ಮಿಗಳಿಂದ ತಯಾರಿಸಲ್ಪಟ್ಟ ಗೊಂಬೆಗಳನ್ನು ಸ್ಥಳೀಯ ಕುಶಲಕರ್ಮಿಗಳಿಗೆ ಪರಿಚಯಿಸಿ ಅದರ ಮೂಲಕ ಉತ್ತಮ ಗೊಂಬೆಗಳನ್ನು ತಯಾರಿಸುವ ತರಬೇತಿ ನೀಡಲಾಯಿತು. ವಿಶ್ವ ಸ್ಕೀಂ ನಲ್ಲಿ ಕರ್ನಾಟಕ ಮತ್ತು ಡಚ್ ಸರ್ಕಾರಗಳಿಂದ ಕುಶಲಕರ್ಮಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ. ಅಮೆರಿಕ**,** ಇಂಗ್ಲೆಂಡ್**,** ಕೆನಡಾ**,** ಬ್ರಿಟನ್**,** ಯುಗೋಸ್ಲಾವಿಯಾ**,** ಜಪಾನ್**,** ಜರ್ಮನಿ ಮತ್ತಿತರ ದೇಶಗಳಿಗೆ ಇಲ್ಲಿನ ಗೊಂಬೆಗಳು ರಫ್ತಾಗುತ್ತವೆ. ಚನ್ನಪಟ್ಟಣ ಟಾಯ್ಸ್ ಮತ್ತು ಹ್ಯಾಂಡಿಕ್ರಾಫ್ಟ್ಸ್**,** ಶ್ರೀ ಬೀರೇಶ್ವರ ಆರ್ಟ್ ಮತ್ತು ಕ್ರಾಫ್ಟ್**,** ನಿಶಿ ಚೌಹಾಣ್ ಅನಿಮಲ್ ಫಾರ್ಮ್ ಮುಂತಾದ ಸೇವಾಸಂಸ್ಥೆಗಳು**,** ಕಂಪನಿಗಳು ಚನ್ನಪಟ್ಟಣದ ಗೊಂಬೆಗಳಿಗೆ ಹೊಸವಿನ್ಯಾಸಗಳನ್ನು ಮತ್ತು ಮಾರುಕಟ್ಟೆಗಳನ್ನು ಒದಗಿಸಲು ನೆರವಾಗುತ್ತಿವೆ.

**ಪ್ರಶ್ನೆಗಳು:**

I. ಚನ್ನಪಟ್ಟಣಕ್ಕೆ ಮೊದಲಿದ್ದ ಹೆಸರು ---------

A. ಮೈಸೂರು
B. ಮಾಲೂರು
C. ಬೆಂಗಳೂರು
D. ಚಂದದ ಪಟ್ಟಣ

II. ಚನ್ನಪಟ್ಟಣದ ಗೊಂಬೆಗಳನ್ನು ಸಾಂಪ್ರದಾಯಿಕವಾಗಿ -------- ಮರದಲ್ಲಿ ತಯಾರಿಸುತ್ತಿದ್ದರು.

A. ಟೀಕ್
B. ರಬ್ಬರ್
C. ಪೈನ್
D. ಆಲೆ

III. ಕೆಳಗೆ ಕೊಟ್ಟಿರುವ ಹೇಳಿಕೆಗಳನ್ನು ಓದಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

ಹೇಳಿಕೆ-1 ಚನ್ನಪಟ್ಟಣದ ಕುಶಲಕರ್ಮಿಗಳು ಮರದ ಆಭರಣಗಳನ್ನು ತಯಾರಿಸುತ್ತಾರೆ.

ಹೇಳಿಕೆ-2 ಕರ್ನಾಟಕ ಮತ್ತು ಡಚ್ ಸರ್ಕಾರಗಳಿಂದ ಚನ್ನಪಟ್ಟಣದ ಕುಶಲಕರ್ಮಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ.

A. ಒಂದನೆ ಹೇಳಿಕೆ ಮಾತ್ರ ಸರಿಯಾಗಿದೆ.
B. ಎರಡನೆ ಹೇಳಿಕೆ ಮಾತ್ರ ಸರಿಯಾಗಿದೆ.
C. ಎರಡು ಹೇಳಿಕೆಗಳು ಸರಿಯಾಗಿವೆ.
D. ಎರಡು ಹೇಳಿಕೆಗಳು ತಪ್ಪಾಗಿವೆ.

IV. ಚನ್ನಪಟ್ಟಣದ ಗೊಂಬೆಗಳ ತಯಾರಿಕಾ ಹಂತಗಳು ಕ್ರಮವಾಗಿ ಹೀಗಿದೆ.

A. ಮರವನ್ನು ಸಂಸ್ಕರಿಸುವುದು, ಗೊಂಬೆಗಳನ್ನು ಕೊರೆಯುವುದು, ಬಣ್ಣ ಹಚ್ಚುವುದು,
B. ಮರವನ್ನು ತರುವುದು, ಸಂಸ್ಕರಿಸುವುದು, ಕತ್ತರಿಸುವುದು, ಗೊಂಬೆಗಳನ್ನು ಕೊರೆಯುವುದು, ಬಣ್ಣ ಹಚ್ಚುವುದು, ಪಾಲಿಶ್ ಮಾಡುವುದು.
C. ಮರವನ್ನು ತರುವುದು, ಕತ್ತರಿಸುವುದು, ಗೊಂಬೆಗಳನ್ನು ಕೊರೆಯುವುದು, ಬಣ್ಣ ಹಚ್ಚುವುದು,
D. ಮರವನ್ನು ತರುವುದು, ಸಂಸ್ಕರಿಸುವುದು, ಬಣ್ಣ ಹಚ್ಚುವುದು, ಪಾಲಿಶ್ ಮಾಡುವುದು

V. ಚನ್ನಪಟ್ಟಣದ ಗೊಂಬೆಗಳನ್ನು ಮಕ್ಕಳ ಆಟಿಕೆಯಾಗಿ ಬಳಸುವುದರಿಂದ ಸುರಕ್ಷತೆಗಾಗಿ-------- ಬಣ್ಣಗಳನ್ನು ಬಳಸಲಾಗುತ್ತದೆ.

A. ಕಪ್ಪು
B. ಕೆಂಪು
C. ನೀಲಿ
D. ಸಸ್ಯಜನ್ಯ

**3. ಕೆಳಗೆ ಕೊಟ್ಟಿರುವ ಡಾ. ಬನ್ನಂಜೆ ಗೋವಿಂದಾಚಾರ್ಯ ಅವರು ಬರೆದ 'ಶುಕನಾಸನ ಉಪದೇಶ' ಎಂಬ ಪಾಠವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

ದುಡ್ಡು ಒಂದು ಕೆಟ್ಟ ಪಿಶಾಚಿ. ಅದು ಕೆಲವರನ್ನು ದೊಡ್ಡಸ್ತಿಕೆಯಲ್ಲಿ ಕುಣಿಸಿಬಿಡುತ್ತದೆ. ಕೆಲವು ಕ್ಷುದ್ರ ಜೀವಿಗಳನ್ನಂತು ಈ ಪಿಶಾಚಿ ಹುಚ್ಚುಗೊಳಿಸಿಬಿಡುತ್ತದೆ. ವಿದ್ಯಾವಂತನನ್ನು ಕಂಡರೆ ಅದಕ್ಕೆ ಕಿಚ್ಚು. ಅವನ ಗೋಜಿಗೇ ಅದು ಬರುವುದಿಲ್ಲ. ಗುಣವಂತನನ್ನು ಕಂಡಾಗ ಕೊಳಕನನ್ನು ಕಂಡರೆ ಹೇಗೆ ಹಾಗೆ ದೂರ ಸರಿಯುತ್ತದೆ. ವೀರರನ್ನು ಕಂಡಾಗ ಅಮಂಗಲವನ್ನು ಕಂಡಂತೆ, ಸಜ್ಜನರನ್ನು ಕಂಡರೆ ಅಪಶಕುನವನ್ನು ಕಂಡಂತೆ ನಡೆದುಕೊಳ್ಳುತ್ತದೆ. ಕುಲೀನನನ್ನು ಕಂಡರೆ ಹಾವು ಸುಳಿದಂತೆ

ಹಿಂಜರಿಯುತ್ತದೆ. ಶೂರರೆಂದರೆ ಮುಳ್ಳಿನಂತೆ, ದಾನಶೀಲರೆಂದರೆ ಕೆಟ್ಟ ಕನಸಿನಂತೆ ಅದಕ್ಕೆ ತ್ಯಾಜ್ಯ. ವಿನಯಶೀಲನನ್ನು, ಪಂಡಿತನನ್ನು ಕಂಡರೆ ಪಾತಕಿಯನ್ನು, ಮರುಳನನ್ನು ಕಂಡಂತೆ ನಡೆದುಕೊಳ್ಳುತ್ತದೆ. ದುಡ್ಡಿನ ಇತಿಹಾಸವೆ ಅಂಥದು.ದುಡ್ಡಿನ ಬಿಸಿ ಬಗೆಯಲ್ಲಿ ಜಾಡ್ಯವನ್ನು ತುಂಬುತ್ತದೆ ದೊಡ್ಡಸ್ತಿಕೆಯ ಜತೆಗೆಯೇ ಕೀಳುಮಟ್ಟದ ಅಭಿರುಚಿಯನ್ನು ಬೆಳೆಸುತ್ತದೆ. ಸಂಪತ್ತು ಬೆಳೆದಷ್ಟು ದುಡ್ಡಿನ ಹಸಿವೂ ಹೆಚ್ಚುತ್ತದೆ. ಐಶ್ವರ್ಯ ಬೆಳೆದಂತೆಯೆ ದುರ್ಗುಣಗಳೂ ಬೆಳೆಯುತ್ತಿರುತ್ತವೆ. ದುಡ್ಡಿನಿಂದ ದೊಡ್ಡವರು ಎನಿಸಿಕೊಂಡವರಲ್ಲಿ ಇರುವಷ್ಟು ದೌರ್ಬಲ್ಯ, ಸಣ್ಣತನ ಇನ್ನೊಂದೆಡೆ ಇರಲಾರದು.

ಸಂಪತ್ತು ಸುಧೆಯ ಜತೆಗೆ ಕಡಲಿನಿಂದ ಹುಟ್ಟಿ ಬಂತಂತೆ. ಆದರೆ ಸ್ವಭಾವದಲ್ಲಿ ಎಂಥ ಅಂತರ! ಅಮೃತ ಸತ್ತವರನ್ನು ಬದುಕಿಸಿದರೆ ಸಂಪತ್ತು ಸೇರಿದಲ್ಲಿ ಮನುಷ್ಯತ್ವವನ್ನೆ ಕೊಲ್ಲುತ್ತದೆ. ಅದಕ್ಕಾಗಿ ಜನ ಹೊಡೆದಾಡಿಕೊಂಡು ಸಾಯುತ್ತಾರೆ. ಆದರೆ ಅದು ಯಾರ ಕಣ್ಣಿಗೂ ಕಾಣಿಸದೆ ಮೋಜು ನೋಡುತ್ತಿರುತ್ತದೆ. ಹರಿಯ ಎದೆಯಲ್ಲಿ ಸಿರಿಯ ವಾಸ ಎನ್ನುತ್ತಾರೆ. ಆದರೆ ಮೂರ್ಖರ ಎದೆಯಲ್ಲಿ ಅದರ ವಾಸ ಎನ್ನುವುದು ನಮಗೆ ತಿಳಿದ ಮಾತು. ಎಂಥ ತಿಳಿಯಾದ ಬಗೆಯಾದರೂ ಸರಿಯೆ; ದುಡ್ಡಿನ ಕಿಲುಬು ತಾಕಿತೆಂದರೆ ಮುಗಿಯಿತು - ಕದಡಿ ಕಲುಷವಾಗಿಬಿಡುತ್ತದೆ.

ದುಡ್ಡಿನ ನಿಜರೂಪ ಎಂಥದು ಗೊತ್ತೆ? ಇದು ಆಸೆಯ ವಿಷಲತೆಗೆ ಎರೆಯುವ ನೀರು. ಇಂದ್ರಿಯಗಳೆಂಬ ಜಿಂಕೆಗಳನ್ನು ಮರುಳುಗೊಳಿಸುವ ಬೇಡನ ಸಂಗೀತ. ಒಳ್ಳೆಯ ನಡತೆಯೆಂಬ ಚಿತ್ರಕ್ಕೆ ಬಳಿದ ಮಸಿ. ಅವಿವೇಕದ ಸವಿನಿದ್ದೆಗೆ ಹಾಸಿದ ಮೆಲುಹಾಸೆ. ಅಹಂಕಾರದ ಪಿಶಾಚಿಗಳಿಗೆ ನೆಲೆಮನೆಯಾದ ಹಳೆಯಟ್ಟ. ಶಾಸ್ತ್ರದ ತಿಳಿವಿಗೆ ಬಿಗಿದ ಕಣ್ಪಟ್ಟಿ. ಎಲ್ಲ ದೌರ್ಜನ್ಯಗಳ ವಿಜಯಧ್ವಜ. ಕೋಪವೆಂಬ ಮೊಸಳೆಯನ್ನು ಹೊತ್ತ ಹೊಳೆ. ವಿಷಯ ಮದ್ಯಗಳ ಪಾನಭೂಮಿ. ಸಜ್ಜನಿಕೆಗೆ ಬೀಸಿದ ಬೆತ್ತ. ಒಳ್ಳೆಯತನವೆಂಬ ಕಲಹಂಸಗಳನ್ನು ಓಡಿಸುವ ಬಿರುಮಳೆ. ಸಜ್ಜನಿಕೆಯನ್ನು ಸುಡುವ ಮಸಣ. ಧರ್ಮವೆಂಬ ಚಂದ್ರಮಂಡಲವನ್ನು ಕಬಳಿಸುವ ರಾಹುವಿನ ಕರಿನಾಲಿಗೆ.

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **5x1=5**

I. ದುಡ್ಡು ಯಾರ ಗೋಜಿಗೆ ಹೋಗುವುದಿಲ್ಲ?
II. ದುಡ್ಡು ಪಂಡಿತನನ್ನು ಕಂಡರೆ ಹೇಗೆ ನಡೆದುಕೊಳ್ಳುತ್ತದೆ?
III. ಅಮೃತ ಮತ್ತು ಸಂಪತ್ತಿಗಿರುವ ವ್ಯತ್ಯಾಸವೇನು?
IV. ದುಡ್ಡಿನ ಕಿಲುಬು ತಾಗಿದರೆ ಏನಾಗುತ್ತದೆ?
V. ದುಡ್ಡು ಅಹಂಕಾರದ ಪಿಶಾಚಿಗಳಿಗೆ ಏನಾಗುತ್ತದೆ?

**4. ಈ ಕೆಳಗೆ ಕೊಟ್ಟಿರುವ ಕುವೆಂಪು ಅವರು ಬರೆದಿರುವ 'ಹಸುರು' ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

**ಹಸುರು**

ನವರಾತ್ರಿಯ ನವಧಾತ್ರಿಯ
ಈ ಶ್ಯಾಮಲ ವನಧಿಯಲಿ
ಹಸುರಾದುದೊ ಕವಿಯಾತ್ಮಂ
ರಸಪಾನ ಸ್ನಾನದಲಿ!
ಹಸುರಾಗಸ; ಹಸುರು ಮುಗಿಲು;
ಹಸುರು ಗದ್ದೆಯಾ ಬಯಲು;
ಹಸುರಿನ ಮಲೆ; ಹಸುರು ಕಣಿವೆ;
ಹಸುರು ಸಂಜೆಯೀ ಬಿಸಿಲೂ!
ಅಶ್ವೀಜದ ಶಾಲಿವನದ

ಗಿಳಿಯೆದೆ ಬಣ್ಣದ ನೋಟ;
ಅದರೆಡೆಯಲಿ ಬನದಂಚಲಿ
ಕೊನೆವೆತ್ತಡಕೆಯ ತೋಟ!
ಅದೊ ಹುಲ್ಲಿನ ಮಕಮಲ್ಲಿನ
ಪೊಸಪಚ್ಚೆಯ ಜಮಖಾನೆ
ಪಸರಿಸಿ ತಿರೆ ಮೈ ಮುಚ್ಚಿರೆ
ಬೇರೆ ಬಣ್ಣವನೆ ಕಾಣೆ!
ಹೊಸ ಹೂವಿನ ಕಂಪು ಹಸುರು,
ಎಲರಿನ ತಂಪೂ ಹಸುರು!
ಹಕ್ಕಿಯ ಕೊರಲಿಂಪು ಹಸುರು!
ಹಸುರು ಹಸುರಿಳೆಯುಸಿರೂ!
ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ
ಹಸರ್ಗಟ್ಟಿತೊ ಕವಿಯಾತ್ಮಂ
ಹಸುರ್ನೆತ್ತರ್ ಒಡಲಿನಲಿ!

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 5X1 =5**

I. ಕವಿಗೆ ಯಾವುವು ಹಸುರಾಗಿ ಕಾಣುತ್ತದೆ.
II. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?
III. ಕವಿಗೆ ಹಸುರು ಹುಲ್ಲು ಹೇಗೆ ಕಾಣುತ್ತದೆ.
IV. ಆಶ್ವಯುಜ ಮಾಸದಲ್ಲಿ ಕವಿಗೆ ಭತ್ತದ ಗದ್ದೆಯು ಹೇಗೆ ಕಾಣುತ್ತದೆ.
V. ಹಸುರು ಪದ್ಯವನ್ನು ಬರೆದ ಕವಿ ಯಾರು?

## SECTION -B

**(ಅನ್ವಯಿಕ ವ್ಯಾಕರಣ ಮತ್ತು ಪಠ್ಯಪೂರಕ ಅಧ್ಯಯನ) = 20 ಅಂಕಗಳು.**

**5. ಕೆಳಗಿನ ಪ್ರತಿಯೊಂದು ಬಹು ಆಯ್ಕೆ ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ. 10X1=10**

I. ಕೆಳಗೆ ಕೊಟ್ಟಿರುವ ಸಂಧಿ - ಸಂಧಿ ಪದಗಳನ್ನು ಹೊಂದಿಸಿ ಬರೆಯಿರಿ.

| | |
|---|---|
| a. ವಧೂಪೇತ | 1. ಲೋಪಸಂಧಿ |
| b. ವಾಗೀಶ | 2. ಗುಣಸಂಧಿ |
| c. ಜ್ಞಾನೇಶ್ವರ | 3. ಸವರ್ಣದೀರ್ಘ ಸಂಧಿ |
| d. ಮಾತಂತು | 4. ಜಶ್ತ್ವಸಂಧಿ |
| | 5. ಆಗಮಸಂಧಿ |

A. a-3 b-4 c-2 d-1
B. a-5 b-1 c- 2 d-3
C. a-3 b- 4 c-5 d-2

D. a-2 b-4 c-3 d-1

II. ಈ ಕೆಳಗಿನ ಪದಗಳಲ್ಲಿ ಸರಿಯಾದ ಸಮಾಸ ಪದಗಳನ್ನು ಹೊಂದಿಸಿ ಬರೆಯಿರಿ.

1. ಬೆಟ್ಟದಾವರೆ - ತತ್ಪುರುಷ ಸಮಾಸ
2. ಬೆಳ್ಗೊಡೆ - ಕರ್ಮಧಾರಯ ಸಮಾಸ
3. ಅಬ್ಜೋದರ - ಕ್ರಿಯಾಸಮಾಸ
4. ಕೈಯನ್ನು - ದ್ವಂದ್ವ ಸಮಾಸ

A. 1 ಮತ್ತು 3

B. 2 ಮತ್ತು 3

C. 1 ಮತ್ತು 2

D. 3 ಮತ್ತು 4

III. 'ಪೂದೋಟಮಂ' ಎಂಬ ಪದವು ದ್ವಿತೀಯಾ ವಿಭಕ್ತಿಯಾದರೆ 'ಧರ್ಮಬುದ್ಧಿಯುಂ' ಎಂಬ ಪದವು ಈ ವಿಭಕ್ತಿಯಾಗಿದೆ.

A. ತೃತೀಯಾ

B. ಸಪ್ತಮೀ

C. ಪ್ರಥಮಾ

D. ಚತುರ್ಥೀ

IV. ನದಿ, ಪರ್ವತ : ರೂಢನಾಮ : : ವ್ಯಾಪಾರಿ, ವಿಜ್ಞಾನಿ : -------

A. ಸರ್ವನಾಮ

B. ಅಂಕಿತನಾಮ

C. ಅನ್ವರ್ಥನಾಮ

D. ಆತ್ಮಾರ್ಥಕ ನಾಮ

V. 'ವಿದ್ಯಾರ್ಥಿಗಳು ಆಟದ ಬಯಲಿನಲ್ಲಿ ಆಟವನ್ನು ಆಡುವರು.' - ಈ ವಾಕ್ಯದಲ್ಲಿ ಕ್ರಿಯಾಪದ -----

A. ವಿದ್ಯಾರ್ಥಿಗಳು

B. ಆಟದ ಬಯಲಿನಲ್ಲಿ

C. ಆಟವನ್ನು

D. ಆಡುವರು

VI. 'ಅರಿವೆ - ಹರಿವೆ' ಈ ಪದಗಳ ಅರ್ಥವ್ಯತ್ಯಾಸಗಳ ಕ್ರಮ ಹೀಗಿವೆ.

A. ಜ್ಞಾನ- ಕತ್ತರಿಸು

B. ಬಟ್ಟೆ - ದೊಡ್ಡ ಪಾತ್ರೆ

C. ಬದುಕು, ಬವಣೆ

D. ಬಟ್ಟೆ -ಒಂದು ಬಗೆಯ ಸೊಪ್ಪು

VII. 'ದೃಗುಜಲ' - ಈ ಪದದ ಸಮಾನಾರ್ಥಕಪದ ------

A. ಶುದ್ಧವಾದ ನೀರು

B. ಕಣ್ಣನೀರು

C. ಕೆರೆಯನೀರು

D. ಬಾವಿಯ ನೀರು

VIII. ಹಿಮಾಲಯ ಪರ್ವತ ಪ್ರದೇಶವು ಭಾರತದ ಉತ್ತರ ಭಾಗದಲ್ಲಿದೆ. - ಈ ವಾಕ್ಯದಲ್ಲಿ ಗೆರೆ ಎಳೆದ ಪದವು ------- ವಾಚಕವಾಗಿದೆ.

A. ವಸ್ತು
B. ಗುಣ
C. ಪ್ರಮಾಣ
D. ದಿಗ್ವಾಚಕ

IX. ಕೆಳಗೆ ಕೊಟ್ಟಿರುವ ತತ್ಸಮ- ತದ್ಭವಗಳ ಸರಿಯಾದ ರೂಪವನ್ನು ಗುರುತಿಸಿ ಬರೆಯಿರಿ.

a. ಪ್ರಸಾದ - ಫಲಕ
b. ವೈಶಾಖ - ಬೇಸಗೆ
c. ವಂಧ್ಯಾ - ಬಂಜೆ
d. ಚೇರಾ - ಸಂತೆ

ಸರಿಯಾದ ಉತ್ತರಗಳನ್ನು ಗುರುತಿಸಿ.

A. a ಮತ್ತು b
B. b ಮತ್ತು c
C. c ಮತ್ತು d
D. a ಮತ್ತು d

X. ಈ ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆಯಿರಿ.

A. ತುತ್ತತುದಿ
B. ಹೌದೌದು
C. ಅಲ್ಲಲ್ಲಿ
D. ಮಕ್ಕಳು ಮರಿ

**6.ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ.** **5X1 =5**

I. ಪ್ರಸ್ತುತ ದಿನಗಳಲ್ಲಿ ಸಾಮಾನ್ಯವಾಗಿ ಪ್ರತಿಯೊಬ್ಬರೂ ತಂತ್ರಜ್ಞಾನವನ್ನು ಬಳಸುವರು. - ಈ ವಾಕ್ಯವನ್ನು ವರ್ತಮಾನಕಾಲದಲ್ಲಿ ಬರೆಯಿರಿ.

II. ಮರದ ಮ್ಯಾಗ ಹಕ್ಕಿ ಕುಳಿತ್ಯೆತೆ - ಈ ವಾಕ್ಯವನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

III. ಕಬಡ್ಡಿ ಪಂದ್ಯವನ್ನು ನೋಡಲು ಸಾವಿರಾರು ಜನರು ಬರುವರು. - ಈ ವಾಕ್ಯವನ್ನು ಸಂಭಾವನಾರ್ಥಕ ರೂಪದಲ್ಲಿ ಬರೆಯಿರಿ.

IV.ಈ ಕೆಳಗಿನ ಗಾದೆಯ ಮಾತಿನ ಅರ್ಥವನ್ನು ಬರೆಯಿರಿ.

'ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ'

ಅಥವಾ

'ಕೂಡಿ ಬಾಳಿದರೆ ಸ್ವರ್ಗಸುಖ'

V. ಮುಕ್ತ ಕಂಠ - ಈ ಪದವನ್ನು ಬಳಸಿ ಸ್ವಂತ ವಾಕ್ಯದಲ್ಲಿ ಬರೆಯಿರಿ.

**7. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.**

**5X1=5**

I 'ಅನ್ ಟು ದಿಸ್ ಲಾಸ್ಟ್' ಈ ಪುಸ್ತಕವನ್ನು ಬರೆದವರು ----------

A. ರಸ್ಕಿನ್

B. ಕಾರ್ಲ್ ಮಾರ್ಕ್ಸ್

C. ಗಾಂಧೀಜಿ

D. ರವೀಂದ್ರನಾಥ್ ಠಾಗೋರ್

II ದ್ರಾವಿಡ ಕಳಗಂ ಎಂಬ ಸಂಘಟನೆಯನ್ನು ಹುಟ್ಟುಹಾಕಿದವರು --------

A. ಸ್ವಾಮಿ ವಿವೇಕಾನಂದ

B. ನಾರಾಯಣಗುರು

C. ಟಿ.ಎಂ.ನಾಯರ್

D. ಪೆರಿಯಾರ್

III. ಒಂದೇ ಒಂದು ಗುಂಡು ಸಹ ದಂಡವಾಗಲಿಲ್ಲ ಎಂದು ಹೇಳಿದವರು------

A. ಭಗತ್ ಸಿಂಗ್

B. ರಾಜ್ ಗುರು

C. ಜನರಲ್ ಡಯರ್

D. ಸುಖ್ ದೇವ್

IV ಸ್ವದೇಶ ಸೂತ್ರದ ಸರಳ ಹಬ್ಬ ಈ ಪಾಠವನ್ನು ಬರೆದವರು --------

A. ಶಿವಾನಂದ ಕಳವೆ

B. ಜಿ ರಾಮಕೃಷ್ಣ

C. ವಿಜಯಶ್ರೀ ಸಬರದ

D. ಜಿ.ಎಸ್ ಶಿವರುದ್ರಪ್ಪ

V ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು------ ಸ್ವಾತಂತ್ರ್ಯವಾಗಿದೆ.

A. ಕ್ರಿಯಾ

B. ರಾಜಕೀಯ

C. ಆರ್ಥಿಕ

D. ಸಾಮಾಜಿಕ

**ಭಾಗ - B (40-ಅಂಕಗಳು)**

**SECTION -C**

**(ಬರವಣಿಗೆ ಕೌಶಲ್ಯ) = 12 ಅಂಕಗಳು**

**8.** ನಿಮ್ಮ ಹತ್ತಿರದ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರು ಪ್ಲಾಸ್ಟಿಕ್ ವಸ್ತುಗಳನ್ನು ಹರಡುತ್ತಿದ್ದು ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವಂತೆ ಪರಿಸರ ಸಂರಕ್ಷಣಾಧಿಕಾರಿಗಳಿಗೆ ಒಂದು ಮನವಿ ಪತ್ರ ಸಲ್ಲಿಸಿ. **1X4=4**

**ಅಥವಾ**

ದಿನಾಂಕ 10-02-2022 ರ ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಮೇರೆಗೆ ಇಲಾಖೆಯಲ್ಲಿ ಖಾಲಿ ಇರುವ ಕಿರಿಯ ಸಹಾಯಕ ಇಂಜಿನಿಯರ್ ಹುದ್ದೆಗೆ, ನಿರ್ದೇಶಕರು ಇಂಧನ ಇಲಾಖೆ ಬೆಂಗಳೂರು -01 ಇವರಿಗೆ ಒಂದು ಅರ್ಜಿಯನ್ನು ಸಲ್ಲಿಸಿ.

**9. ನಿಮ್ಮ ಶಾಲೆಯಲ್ಲಿ ನಡೆದ ಹತ್ತನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ಕುರಿತು ಒಂದು ವರದಿಯನ್ನು ತಯಾರಿಸಿ.** **1X4=4**

**10. ಈ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ.** **1X4=4**

I. ಗ್ರಾಮ ಸ್ವರಾಜ್ಯ

II. ನನ್ನ ನೆಚ್ಚಿನ ಕ್ರೀಡೆ

III. ರಾಷ್ಟ್ರೀಯ ಭಾವೈಕ್ಯತೆ

**SECTION -D**

**(ಪದ್ಯಗಳ ಅಧ್ಯಯನ) =28 ಅಂಕಗಳು**

**11. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.** **4X2=8**

I. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?

II. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?

III. ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿ ಮಾಡಿ.

IV. ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ-ಏಕೆ?

**12. ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ.** **2X3= 6**

I. ವ್ಯಕ್ತಿಗಳನ್ನು ಆದರ್ಶವಾಗಿ ಸ್ವೀಕರಿಸಲು ಇರುವ ತೊಡಕುಗಳೇನು?

II. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.?

**13. ಈ ಕೆಳಗಿನ ಪ್ರಶ್ನೆಗಳಿಗೆ ಸಂದರ್ಭಹಾಗೂ ಸ್ವಾರಸ್ಯದೊಡನೆ ವಿವರಿಸಿ.** **2X3= 6**

**I.** "ಸಾಮಾಜಿಕ ಕಾನೂನುಗಳ ಹರಿಕಾರ"

ಅಥವಾ

"ಪೊನ್ನನೆಲ್ಲಮಂ ನೀನೆ ಕೊಂಡೆ"

**II.** "ಜೀವ ಸತ್ತು ಹೋಗುವುದು ಗೊತ್ತ"

ಅಥವಾ

"ಪ್ರೀತಿಯ ಹಣತೆಯ ಹಚ್ಚೋಣ"

**14. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **1X4=4**

I. ವೃಕ್ಷಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ?

ಅಥವಾ

ಶಬರಿಯ ಚಿಂತೆ ಹಿಂಗಿ ಹೋದ ಸ್ವಾರಸ್ಯವನ್ನು ವಿವರಿಸಿ.

**15. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **1X4=4**

I. ನಾವು ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ?

ಅಥವಾ

ಕರ್ಣನಿಗೆ ಶ್ರೀಕೃಷ್ಣನು ನೀಡಿದ ಆಮಿಷಗಳೇನು? ವಿವರಿಸಿ.

*****************************************************